ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂ: **DTE-ADMI0SCH1/10/2025**

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ ಬೆಂಗಳೂರು - 560 001.
ದಿನಾಂಕ: 16-07-2025.

**-:: ಸುತ್ತೋಲೆ ::-**

**ವಿಷಯ :** 2025-26ನೇ ಸಾಲಿಗೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ **"Pradhan Mantri Uchchatar Shiksha Protsahan" (PM-USP)** ಯೋಜನೆಯಡಿ **Central Sector Scheme of Scholarship for college and University students(CSSS)** ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ :** ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯ, ನವದೆಹಲಿ ಇವರ ಪತ್ರ ಸಂಖ್ಯೆ-1-39/2018 NS-1 ದಿ:10-06-2025.

*******

ಎ.ಐ.ಸಿ.ಟಿ.ಇ ಯಿಂದ ಮಾನ್ಯತೆ ಪಡೆದಿರುವ ರಾಜ್ಯದ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಬಡ ಕುಟುಂಬಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗವನ್ನು ಮುಂದುವರಿಸಲು ಮತ್ತು ಅವರ ದೈನಂದಿನ ವೆಚ್ಚದ ಒಂದು ಭಾಗವನ್ನು ಪೂರೈಸಲು, ಹಣಕಾಸಿನ ನೆರವು ನೀಡುವ ಸಲುವಾಗಿ ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯ, ನವದೆಹಲಿ ಇವರ ವತಿಯಿಂದ ವಿದ್ಯಾರ್ಥಿವೇತನ ಯೋಜನೆಯು ಈ ಕೆಳಕಂಡಂತೆ ಪ್ರಾರಂಭಿಸಲಾಗಿರುತ್ತದೆ.

**"Pradhan Mantri Uchchatar Shiksha Protsahan" (PM-USP)ಯೋಜನೆಯಡಿಯಲ್ಲಿ Central Sector Scheme of Scholarship for college and University students(CSSS) :-** ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.**4.5** ಲಕ್ಷ ಮಿತಿಯೊಳಗೆ ಇರುವ ಶೇ.**80**ಕ್ಕಿಂತ ಹೆಚ್ಚು ಅಂಕ ಪಡೆದಿರುವ **(Class XII of 10+2 pattern or equivalent)** ವಿದ್ಯಾರ್ಥಿಗಳಿಗೆ.

ಉಲ್ಲೇಖಿತ ಅಧಿಸೂಚನಯಲ್ಲಿ ತಿಳಿಸಿರುವಂತೆ 2025-26ನೇ ಸಾಲಿಗೆ ರಾಜ್ಯದ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ Central Sector Scheme of Scholarship for college and University students(CSSS) ಹೆಸರಿನ ಸ್ಕೀಂನಡಿ ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, **ಅದರಂತೆ ಪ್ರತಿಯೊಬ್ಬ ಅರ್ಹ ವಿದ್ಯಾರ್ಥಿಯು ಸರ್ಕಾರದ ಯಾವುದಾದರೂ ಒಂದು ಆರ್ಥಿಕ ಸೌಲಭ್ಯವನ್ನು ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ**. ಆದ್ದರಿಂದ, ಅರ್ಹ ವಿದ್ಯಾರ್ಥಿಗಳು ರಾಷ್ಟ್ರೀಯ ವಿದ್ಯಾರ್ಥಿವೇತನ **http://scholarships.gov.in/Students** ರ ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸಲು ದಿನಾಂಕ: **31-10-2025** ರಂದು ಅಂತಿಮ **ದಿನಾಂಕವಾಗಿರುತ್ತದೆ.**

"ವಿದ್ಯಾರ್ಥಿವೇತನಕ್ಕೆ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸುವ ಮೊದಲು ವಿದ್ಯಾರ್ಥಿಗಳು ತಾವು ಹೊಂದಿರುವ ರಾಷ್ಟ್ರೀಕೃತ ಬ್ಯಾಂಕ್ ಖಾತೆಗಳಿಗೆ ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಜೋಡಣೆ **(NPCI Link - aadhaar number to Bank Account)** ಮಾಡಲು ಸಂಸ್ಥೆಯವರು ವಿದ್ಯಾರ್ಥಿಗಳಿಗೆ ತಿಳಿಸುವುದು".

ಹೆಚ್ಚಿನ ಮಾಹಿತಿಗಾಗಿ **"Pradhan Mantri Uchchatar Shiksha Protsahan"** ***(PM-USP)*** ಯೋಜನೆಯ ***Central Sector Scheme of Scholarship for college and University students(CSSS)*** ಮಾರ್ಗ ಸೂಚಿಗಳನ್ನು ಇದರೊಂದಿಗೆ ಲಗತ್ತಿಸಿದೆ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,

1. **ಪ್ರಾಂಶುಪಾಲರು**, ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಗೆ - ಮುಂದಿನ ಅಗತ್ಯ ಕ್ರಮಕ್ಕಾಗಿ (ಸಂಸ್ಥೆಯ ಸೂಚನ ಫಲಕಗಳಲ್ಲಿ & ವೆಬ್ ಸೈಟ್ ನಲ್ಲಿ) ಪ್ರಚರ ಪಡಿಸುವುದು.
2. ಸಂಯೋಜನಾಧಿಕಾರಿಯವರು, ಇ-ಆಡಳಿತ, ತಾ.ಶಿ.ಇ, ಬೆಂಗಳೂರು. (ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು).